QP. Code: 41201

ದ್ವಿತೀಯ ಸೆಮಿಸ್ಟರ್. ಬಿ.ಎಸ್ಸಿ. ಪದವಿ ಪರೀಕ್ಷೆ
ಮೇ/ಜೂನ್ 2026
(SEP SCHEME)
ಕನ್ನಡ ಭಾಷಾ ಪತ್ರಿಕೆ – ೨
(SSB 0010) ವಿಜ್ಞಾನ ಸೌರಭ – ೨

ಸಮಯ : 3 ಗಂಟೆಗಳು ಅಂಕಗಳು : 80

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ಪ್ರಶ್ನೆ ಪತ್ರಿಕೆಯ ಮೇಲೆ (ನೊಂದಣಿ ಸಂಖ್ಯೆ ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

1. ಅ) ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. (6x2=12)

1. ಬಾಹುಬಲಿ ಕೈಗೊಂಡ ಪ್ರತಿಜ್ಞೆ ಯಾವುದು?
2. ಬಂಡೆಪ್ಪಗೌಡರ ಜನಪ್ರಿಯತೆಗೆ ಕಾರಣವೇನು?
3. ಒಕ್ಕಲಿಗ ಮುದ್ದಣ್ಣನ ಒಕ್ಕಲುತನದ ಬಗೆಗಿನ ವಚನದ ತಾತ್ಪರ್ಯವೇನು?
4. ದಲಿತ ಸಂಘರ್ಷ ಸಮಿತಿಯ ಸ್ಥಾಪನೆಯ ಉದ್ದೇಶವೇನು?
5. ಅಪ್ಪ ಸತ್ತಾಗ ಅವ್ವ ಮಗನನ್ನು (ಕವಿಯನ್ನು) ಸಂತೈಸಿದ ಪರಿ ಹೇಗಿತ್ತು?
6. ಪೆರಿಯಾರ್ ಅವರನ್ನು ದಕ್ಷಿಣ ಭಾರತದ ಸಾಕ್ರೇಟಿಸ್ ಎಂದು ಕರೆಯಲು ಕಾರಣವೇನು?
7. ಹಯವದನರಾವ್ ಪಾಪಣ್ಣನನ್ನು ಯಾವ ಕೆಲಸಕ್ಕೆ ಸೇರಿಸಿಕೊಳ್ಳಲು ಶಿಫಾರಸ್ಸು ಮಾಡಿದರು.
8. ಪಂಚಮನು ಯಾವ ರೀತಿಯ ಬದಲಾವಣೆ ಆಗಬೇಕು ಎಂದು ಬಯಸಿದನು?

ಆ) ಈ ಕೆಳಗಿನ ಯಾವುದಾದರೂ ಎಂಟು ಪದಗಳಿಗೆ ಅರ್ಥ ಬರೆಯಿರಿ $(8x^1/_2=4)$

1) ನಂಜು	2) ಸಿಗ್ಗು	3) ತೊಗಲು	4) ಧಮನಿ
5) ಕೂರಿಗೆ	6) ಸ್ವಪಚ	7) ಧರೆ	8) ಶೂಲ
9) ತ್ಯಜಿಸು	10) ಮಸುನಿ	11) ಸೊರಗು	12) ಕೆಂಗಿಡಿ

2. ನಾಲ್ಕು ವಿಷಯಗಳಿಗೆ ಟಿಪ್ಪಣಿ ಬರೆಯಿರಿ (4x3=12)

1) ಪಂಪ	2) ಜನಪದ ಕಲೆಗಳು	3) ಹೆಚ್.ಎಸ್.ಪಾರ್ವತಿ
4) ಯಾರಿವರು?	5) ಮೋಳಿಗೆಯ ಮಾರಯ್ಯ	6) ಪುಟ್ಟಲಕ್ಕಮ್ಮ

3. ಯಾವುದಾದರೂ ನಾಲ್ಕು ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. (4x3=12)

1. ಸೋದರರೊಳ್ ಸೋದರರಂ ಕಾದಿಸುವುದು
2. ಜಗತ್ತಿನಲ್ಲಿ ಯುದ್ಧಗಳಾಗಬಾರದು, ಶಾಂತಿ ಸ್ಥಾಪನೆ ಮಾಡಬೇಕು.

3. ಭೂಮಿ ಆಕಾಶದ ನಡುವೆ ಹರಿದ ಸೂರಿನ ಮನೆ ನಮ್ಮದು.
4. ಆಂಟಿ ಆ ಪಾಟ್‌ನಲ್ಲಿಯ ವಾಟರ್ ಕೊಡುತ್ತಿರಾ?
5. ರೀ ನೀವು ಕೂತ್ಕೋಬೇಕು ಅನ್ನೋದು ಗೌರ್ನಮೆಂಟ್‌ರೂಲ್ಸ್ ಕುತ್ಕೋಳ್ರಿ.
5. ವೆರಿಗುಡ್ ಯಾವ ಪಾರ್ಟಿ ನಿಮ್ದು?

4. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(4x5=20)**

1. ಬಾಹುಬಲಿಯ ವೈರಾಗ್ಯಭಾವ ಪಂಪನ ಕಾವ್ಯದಲ್ಲಿ ಹೇಗೆ ಮೂಡಿಬಂದಿದೆ?
2. ಶಿವರಾಜ್‌ಪಾಟೀಲರು ವಿದ್ಯಾರ್ಥಿ ನಾಯಕರಾಗಿ ಬೆಳೆದ ಬಗೆಯನ್ನು ತಿಳಿಸಿ.
3. ಕೃಷಿ ಬಗೆಗಿನ ಶರಣರ ತತ್ವ ಚಿಂತನೆಗಳು ಹೇಗಿದ್ದವು? ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.
4. ಜಾತಿಯ ಕರಾಳಮುಖ 'ಬ್ಲಾಕ್ ಇಂಕ್' ಕಥೆಯಲ್ಲಿ ಹೇಗೆ ಅನಾವರಣಗೊಂಡಿದೆ?
5. ಕರ್ನಾಟಕದಲ್ಲಿ ದಲಿತ ಚಳುವಳಿಯ ಬೆಳವಣಿಗೆಗೆ ದಲಿತ ನಾಯಕರ ಕೊಡುಗೆಗಳನ್ನು ತಿಳಿಸಿ.
6. ಪಂಚಮನ ಪಾತ್ರವು ನಾಟಕಕ್ಕೆ ಹೇಗೆ ಒಪ್ಪುತ್ತದೆ? ವಿಶ್ಲೇಷಿಸಿರಿ.

5. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(2x10=20)**

1. ಪ್ರಾಣಿಗಳೊಂದಿಗಿನ ಮನುಷ್ಯನ ಮಧುರ ಮೈತ್ರಿಯು 'ಭಲೇ ಎತ್ತು!' ಕಥೆಯಲ್ಲಿ ಹೇಗೆ ಮೂಡಿಬಂದಿದೆ, ವಿವರಿಸಿ.

ಅಥವಾ

ಕೃಷಿಯೊಂದಿಗೆ ಬೆರೆತಿರುವ ರೈತನ ಬದುಕನ್ನು 'ಮಣ್ಣಿನ ಕವಿತೆ'ಯ ಹಿನ್ನೆಲೆಯಲ್ಲಿ ವಿವರಿಸಿರಿ.

2. ಮಹಾತ್ಮರು ಶಿಕ್ಷೆಗೊಳಗಾದರೂ ಅವರು ಪ್ರತಿಪಾದಿಸಿದ ತತ್ವ ಆದರ್ಶಗಳು ಇಂದಿಗೂ ಪ್ರಸ್ತುತವಾಗಿರುವ ಬಗೆಯನ್ನು 'ಆದರ್ಶ ಮತ್ತು ಶಿಕ್ಷೆ' ಲೇಖನದಲ್ಲಿ ಹೇಗೆ ನಿರೂಪಿಸಲಾಗಿದೆ?

ಅಥವಾ

ಅಕ್ಷರದ ವಿವೇಕ ಮತ್ತು ಸ್ವಾಭಿಮಾನದ ಪ್ರತೀಕವಾಗಿ 'ಪಂಚಮ' ನಾಟಕ ಹೇಗೆ ಮೂಡಿ ಬಂದಿದೆ, ವಿವರಿಸಿ.

* * *